MYSORE LEGISLATIVE ASSEMBLY

FIRST DAY

Monday, 11th October 1954.

The House met in the Legislative Assembly Hall, Old Public Offices, Bangalore, at Twelve of the Clock.

MR. DEPUTY SPEAKER (SRI R. CHENNIGARAMIAH) in the Chair.

MEMBERS SWORN.

Name				*Constituency*
Sri G. S. Bomme Gowda	...	...	...	Mandya
Sri H. M. Channabasappa, B.A., LL.B.		...	...	Periyapatna

SECRETARY'S REPORT

SECRETARY.—Sir, I beg to lay on the table a statement showing the Acts which have received the assent of His Highness the *Rajpramukh* or the *President* subsequent to the previous report made during the last session.

QUESTIONS AND ANSWERS

Government Servants (Lists of Properties)

Q.—1. Sri S. KARIAPPA (Virupakshapura).—

Will the Government be pleased to state :—

(*a*) whether they have taken the lists of properties owned by persons in Government service ;

(*b*) when this system of taking lists of properties owned by Government servants was first commenced ;

(*c*) whether this practice is still continuing ?

A.—Sri K. HANUMANTHAIYA (Chief Minister).—

(*a*) Yes.
(*b*) About the year 1915.
(*c*) Yes.

ಶ್ರೀ ಎಸ್. ಕರಿಯಪ್ಪ.—ಸರ್ಕಾರಿ ನೌಕರಿಯಲ್ಲಿರ ತಕ್ಕವರ ಆಸ್ತಿಪಾಸ್ತಿಗಳ ಪಟ್ಟಿಯನ್ನು ಯಾವ ಉದ್ದೇಶದಿಂದ ತೆಗೆದುಕೊಳ್ಳುತ್ತಿದ್ದೀರಿ ?

ಶ್ರೀ ಕೆ. ಹನುಮಂತಯ್ಯ.—ಎಷ್ಟೆಷ್ಟು ಆಸ್ತಿ ಸಂಪಾದಿಸಿದ್ದಾರೆಂಬುದನ್ನು ನೋಡೋಣ ಎಂಬ ಉದ್ದೇಶದಿಂದ.

ಶ್ರೀ ಎಸ್. ಕರಿಯಪ್ಪ.—ನೌಕರಿಗೆ ಸೇರಿದ ಲಾಗಾಯ್ತು ಅವರ ಆಸ್ತಿಪಾಸ್ತಿ ಹೆಚ್ಚಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಅಳತೆಮಾಡಿ ತಿಳಿದು ಕೊಳ್ಳುವುದಕ್ಕಾಗಿ ಅಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಹೌದು.

ಶ್ರೀ ಎಸ್. ಕರಿಯಪ್ಪ.—ಹಾಗೆ ಪಟ್ಟಿ ತಯಾರಿಸಿ ಕೆಲವು ವರ್ಷಗಳಾದಮೇಲೆ ಅವರ ಆಸ್ತಿ ಹೆಚ್ಚಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಿದ್ದೀರಾ ?

ಶ್ರೀ ಕೆ. ಹನುಮಂತಯ್ಯ.—ಅದು ಪರಿಶೀಲನೆಯಲ್ಲಿ ಇದ್ದೇ ಇರುತ್ತದೆ.

ಶ್ರೀ ಎಸ್. ಕರಿಯಪ್ಪ.—ಹಾಗೆ ಪರಿಶೀಲನೆ ನಡೆಸಿರುವುದರಲ್ಲಿ ತಿಂಗಳಿಗೆ ಸಾವಿರ ರೂಪಾಯಿಗಳಮೇಲೆ ಸಂಬಳ ಪಡೆಯುತ್ತಿರುವವರ cases ಎಷ್ಟು ಗಮನಕ್ಕೆ ಬಂದಿವೆ?

ಶ್ರೀ ಕೆ. ಹನುಮಂತಯ್ಯ.—ಸಾವಿರ ರೂಪಾಯಿಗಳ ಮೇಲೆ ಸಂಬಳ ಪಡೆಯುತ್ತಿರುವವರ ವಿಚಾರದಲ್ಲಿ ಇದುವರೆಗೆ ಅನುಮಾನಪಟ್ಟಿಲ್ಲ. ಆ ರೀತಿ ಅನುಮಾನ ಪಡತಕ್ಕ ಪ್ರಸಂಗ ಕಂಡು ಬಂದರೆ ಪರಿಶೀಲಿಸುತ್ತೇವೆ.

ಶ್ರೀ ಎಸ್. ಕರಿಯಪ್ಪ.—ತಿಂಗಳಿಗೆ ಐನೂರು ರೂಪಾಯಿಗಳಮೇಲೆ ಸಂಬಳ ಪಡೆಯುತ್ತಿರುವವರ ವಿಚಾರದಲ್ಲಿ ಏನಾದರೂ ಈ ರೀತಿ ಪರಿಶೀಲನೆ ನಡೆಸಿದ್ದೀರಾ ?

ಶ್ರೀ ಕೆ. ಹನುಮಂತಯ್ಯ.—ನಡೆಸಿದೆ.

ಶ್ರೀ ಎಸ್. ಕರಿಯಪ್ಪ.—ಅಂಥ cases ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಕೆ. ಹನುಮಂತಯ್ಯ.—ಒಂದು case ಮಾತ್ರ ಗಮನಕ್ಕೆ ಬಂದಿದೆ. ಅವರಿಂದ ಈ ವಿಚಾರದಲ್ಲಿ ವಿವರಣೆ ಕೇಳಿದೆ.

ಶ್ರೀ ಎಸ್. ಕರಿಯಪ್ಪ.—ಅವರಿಗಿರತಕ್ಕ ಆಸ್ತಿ ಪಾಸ್ತಿಗಳನ್ನು ಹೆಂಡತಿ, ಮಕ್ಕಳ ಹೆಸರಿಗೆ ಮಾಡಿಬಿಟ್ಟಿದ್ದಾರೆ. ಅಂಥ ಸಂದರ್ಭದಲ್ಲಿ ಯಾವರೀತಿ ಪರಿಶೀಲನೆ ನಡೆಸುತ್ತೀರಿ ?

ಶ್ರೀ ಕೆ. ಹನುಮಂತಯ್ಯ.—ಅಂಥ ಸಂದರ್ಭಗಳಿದ್ದರೆ ಕಂಡುಹಿಡಿಯುವುದು ಕಷ್ಟ. ಆದರೂ ಅನುಮಾನ ಕಂಡುಬಂದರೆ ಅನುಮಾನದ ಪ್ರಸಂಗಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ.